ಭಯೋತ್ಪಾದನೆ

ಪೀಠಿಕೆ : 21 ನೇ ಶತಮಾನದ ಜಗತ್ತು ಎದುರಿಸುತ್ತಿರುವ ಅತ್ಯಂತ ಪ್ರಮುಖ ಸಮಸ್ಯೆಗಳಲ್ಲಿ ಭಯೋತ್ಪಾದನೆ ಎನ್ನುವಂತಹದ್ದು ಒಂದು. ಆಧುನಿಕ ಜಗತ್ತಿಗೆ ಅಂಟಿಕೊಂಡಿರುವ ಒಂದು ಶಾಪವಾಗಿದೆ. ವಿಶ್ವಶಾಂತಿಗೆ ಧಕ್ಕೆಯನ್ನುಂಟು ಮಾಡುವ ಹೇಯ ಕೃತ್ಯವಾಗಿದೆ.

ವಿವರಣೆ : Terrorism(ಟೆರರಿಸಂ) ಎನ್ನವ ಪದ ಲ್ಯಾಟಿನ್ ಭಾಷೆಯ Terre(ಟೆರ್ರೆ)ಎಂಬ ಪದದಿಂದ ಹುಟ್ಟಿದ್ದು ಭಯಪಡಿಸು, ನಡುಗಿಸು ಎಂದರ್ಥ. ಅಂದರೆ ಭಯವನ್ನು ಹುಟ್ಟಿಸುವುದು. ಭಯೋತ್ಪಾದನೆ ಎಂದರೆ ಹಿಂಸಾತ್ಮಕ ಕೃತ್ಯಗಳ ಮೂಲಕ ಜನರಲ್ಲಿ ಭಯವನ್ನು ಉತ್ಪಾದನೆ ಮಾಡುವುದು. ಕೆಲವು ವ್ಯಕ್ತಿಗಳು ಅಥವಾ ಗುಂಪುಗಳು ಜನರಲ್ಲಿ ಹಿಂಸಾತ್ಮಕ ತಂತ್ರ ಮತ್ತು ನಿರಂತರ ದಾಳಿಯ ಮೂಲಕ ಜನರನ್ನು ಬೆದರಿಸುವುದು, ಭಯಪಡಿಸುವುದಾಗಿದೆ. 17ನೇ ಶತಮಾನದ ಫ್ರಾನ್ಸ ಕ್ರಾಂತಿಯ ಸಂದರ್ಭದಲ್ಲಿ ಜಾಕೋಬಿನ ಆಡಳಿತದ ಅವಧಿಯಲ್ಲಿ ಸುಮಾರು 40 ಸಾವಿರ ಜನರನ್ನು ಕೊಲ್ಲಲಾಗಿತ್ತು. ಆ ಸಂದರ್ಭದಲ್ಲಿಯೆ ಭಯೋತ್ಪಾದನೆ ಎಂಬ ಶಬ್ದ ಚಾಲ್ತಿಗೆ ಬಂದಿತು. ಇಂದು ವಿಶ್ವದಾದ್ಯಂತ ತನ್ನ ಕಬಂಧ ಬಾಹುಗಳನ್ನು ಚಾಚುತ್ತಿದೆ.

ಭಯೋತ್ಪಾದನೆಗೆ ಅನೇಕ ಕಾರಣಗಳಿವೆ. ಹೆಚ್ಚುತ್ತಿರುವ ಜನಸಂಖ್ಯೆ, ಬಡತನ, ಜನಾಂಗೀಯ ಸಂಘರ್ಷ, ಧರ್ಮಗಳ ಪ್ರತಿಷ್ಟೆ, ಮೂಲಭೂತವಾದ ಗುಂಪುಗಳ ಸಂಘರ್ಷ, ಪ್ರಾದೇಶಿಕ ಅಸಮತೋಲನ, ಯುದ್ಧ ಸಂಘರ್ಷಗಳು, ನಿರುದ್ಯೋಗ, ಇತ್ಯಾದಿ ಹೆಸರಿಸಬಹುದು.

ಐಸಿಸ್,ಮುಜಾಹಿದ್ದಿನ್,ಎಲ್‌ಟಿಟಿಇ,ತಾಲಿಬಾನ್ ನಂತಹ ಸಂಘಟನೆಗಳು ಭಯೋತ್ಪಾದನೆ ಯಲ್ಲಿ ತೊಡಗಿಕೊಂಡಿವೆ. ಅಮೇರಿಕಾ,ಭಾರತ.ಫ್ರಾನ್ಸ್,ಪಾಕಿಸ್ತಾನ,ಅಫ್ಘಾನಿಸ್ತಾನ,ಇಂಗ್ಲೆಂಡ್,ರಷ್ಯಾ ಮುಂತಾದ ದೇಶಗಳು ಭಯೋತ್ಪಾದನಾ ಪಿಡುಗಿಗೆ ಸಿಲುಕಿಕೊಂಡ ಪ್ರಮುಖ ರಾಷ್ಟ್ರಗಳಾಗಿವೆ.

ಉಪಸಂಹಾರ : ಆಧುನಿಕ ಜಗತ್ತಿಗೆ ಅಂಟಿಕೊಂಡಿರುವ ಭಯೋತ್ಪಾದನೆಯಂತಹ ಶಾಪವನ್ನು ತೊಡೆದು ಹಾಕಲು ಇಡಿ ವಿಶ್ವ ಸಮುದಾಯವೇ ಒಂದಾಗಬೇಕು. ಇಲ್ಲವಾದರೆ ವಿಶ್ವಶಾಂತಿಗೆ ಧಕ್ಕೆಯನ್ನುಂಟು ಮಾಡಿ, ಸಮಾಜದ ನೀತಿನಿಯಮಗನ್ನು ದಿಕ್ಕರಿಸಿ ವ್ಯವಸ್ಥೆಯನ್ನೆ ಬುಡಮೇಲು ಮಾಡಬಹುದು. ಪ್ರತಿಯೊಬ್ಬರಲ್ಲಿಯೂ ಅದರಿಂದಾಗುವ ಹಾನಿಯ ಬಗ್ಗೆ ತಿಳಿಸಿ ಅದನ್ನು ಮಟ್ಟ ಹಾಕಲು ಶ್ರಮಿಸಬೇಕು.